# VI Semester B.Com. Examination, May/June 2014
# (Prior to 2013-14) (Repeaters)
# Commerce
# Paper – 6.2 : INCOME TAX – II

Time : 3 Hours                                                                 Max. Marks : 90

***Instruction*** *: Answer should be written either in* ***Kannada*** *or in* ***English.***

## SECTION – A

Answer **any ten** of the following. **Each** question carries **two** marks. **(10×2=20)**

1. a) What do you mean by profession ?

   b) Mention any two expressly allowable expenses under business head.

   c) Expand CBDT and PAN.

   d) What is tax free commercial debenture ?

   e) What is self-assessment ?

   f) Give the meaning of Total Income.

   g) What is Long Term Capital Asset ?

   h) What is Indexed Cost of acquisition ?

   i) Mention the provision of Section 80 DD.

   j) What is causal income ?

   k) Write any two incomes under income from other sources.

   l) What do you mean by capital gain ?

SECTION – B

Answer **any 5** of the following. **Each** question carries **5** marks. **(5×5=25)**

2. Explain the provision of Section 54 of IT Act under head capital gains.

3. Briefly explain the powers and functions of Income Tax Officer.

4. P & L A/c of a trader shows net profit of Rs. 22,000 after charging the following items :

   Income Tax Rs. 8,000, Income Tax appeal expense Rs. 5,000, Interest on loan taken for business purposes Rs. 3,000, Purchase of furniture for office purposes Rs. 4,000, Payment to a creditor in cash Rs. 30,000, Donation to National Defence Fund Rs. 5,000 and Bad debts recovered (disallowed in the past) Rs. 5,000.

   Find his Income from business for the A.Y. 2013-14.

5. Mr. Pawan has the following incomes during the year ending 31-3-13.

   i) Dividend declared by Tata Company Rs. 12,000.

   ii) Interim dividend received Rs. 5,000.

   iii) He won gold worth Rs. 2,50,000 from Rajasthan State lottery.

   iv) Interest received on Govt. securities held as investment Rs. 20,000.

   v) He earned Rs. 10,000 as prize money on horse races.

   Compute his Income from other sources for the A. Y. 2013-14.

6. Mr. Raghu purchased a plot of land for Rs. 1,20,000 on 1-1-85 and sold it for Rs. 18,00,000 on 1-1-2013. If the brokerage paid on its sale was Rs. 12,000. Determine the amount of capital gain.

   [CII : 1984-85 – 125, 2012-13 – 852]

7. Mention the 5 powers of Central Board of Direct Taxes.

8. From the following information of Dr. Babu, compute his taxable income from profession for the A.Y. 13-14.

   Receipts : Consultation fees Rs. 50,000, Gifts from patients Rs. 20,000, Gifts from father-in-law Rs. 30,000, Sale of medicine Rs. 12,000, Visiting fees Rs. 10,000.

   Payments : Clinic rent Rs. 25,000, Professional books purchased Rs. 12,000, Charitable donations Rs. 4,000.

9. Mr. Murthy a citizen, furnishes the following particular for P.Y. 2012-13.

   a) Pension received Rs. 6,000 p.m.

   b) Taxable income from business Rs. 1,28,000.

   c) Short term capital gain of Rs. 1,10,000.

   d) He contributed Rs. 15,000 towards Life Insurance Policy and Rs. 2,000 towards NSC.

   What is his taxable income for the A.Y. 2013-14 ?

SECTION – C

Answer **any three** of the following. **Each** question carries **15** marks. **(3×15=45)**

10. Dr. Nagaraja submits the following particulars, calculate the income from profession for the A.Y. 13-14.

**Receipts and Payments A/c**

| **Particulars** | **Amt.** | **Particulars** | **Amt.** |
|---|---|---|---|
| To Opening balance b/d | 25,000 | By Salary to staff | 46,000 |
| To Consultation fees | 75,000 | By Purchase of medicines | 18,000 |
| To Visiting fees | 62,500 | By Purchase of car | 2,40,000 |
| To Agricultural income | 40,000 | By Car expenses | 20,000 |
| To Interest on bank deposits | 10,000 | By Personal expenses | 45,000 |
| To Gift from patients | 15,000 | By Income tax | 15,000 |
| To Rent from H.P. | 48,000 | By LIC premium | 10,000 |
| To Loan from bank |  | By Repayment of loan | 35,000 |
| for profession | 1,00,000 | By municipal tax on |  |
| To Operation charges | 90,000 | house property | 5,000 |
| To Sale of medicines | 32,500 | By Interest on loan | 7,500 |
|  |  | By Closing balance c/d | 56,500 |
|  | **4,98,000** |  | **4,98,000** |

**Additional Information :**

a) 25% of car expenses relate to personal use.

b) Rate of depreciation on car 15%.

c) $\frac{1}{4}$ of the loan is taken for personal purpose.

11. From the following P & L A/c and additional information of Mr. Nayak, compute his taxable business income for the A.Y. 2013-14.

**P & L A/c for the year ended 31-3-13**

| | Rs. | | Rs. |
|---|---|---|---|
| Establishment expenses | 15,000 | Gross Profit | 2,65,000 |
| Salaries | 36,000 | Dividend on shares | 6,000 |
| Rent and taxes | 12,000 | Rent from H.P. | 15,000 |
| Income tax | 10,000 | Interest on Govt. Securities | 20,000 |
| Household expenses | 14,000 | | |
| Reserve for bad debts | 5,000 | | |
| Advertisement | 15,000 | | |
| Donation | 6,000 | | |
| Sales tax | 20,000 | | |
| Provision for income tax | 8,000 | | |
| Drawings | 4,000 | | |
| Interest on capital | 9,000 | | |
| Bad debts | 19,500 | | |
| Repairs | 26,000 | | |
| Car expenses | 11,000 | | |
| Depreciation | 20,500 | | |
| Net profit | 75,000 | | |
| | **3,06,000** | | **3,06,000** |

**Additional information** :

a) Salaries include Rs. 6,000 paid to a domestic servant.

b) 60% of car expenses are for business purpose.

c) Establishment expenses includes Rs. 5,000 personal expenses.

12. Mr. Ramakrishna, a Resident of Mysore, Purchases a Residential House in Mysore on 16th Nov. 1970 for Rs. 2,26,000. He constructed a room on the ground floor in July, 1981 at a cost of Rs. 40,000 and two more rooms on the first floor in August 1993 at a cost of Rs. 92,000.

    He sold this property on 13th March 2013 for Rs. 35,00,000 after incurring 1% brokerage. The FMV as on 1-4-1981 was Rs. 1,80,000. Find out capital gain for the A.Y. 2013-14 if he purchases a residential flat in Mysore on 25th March 2013 for Rs. 32,00,000.

    [CII for 81-82 = 100, 93-94 = 244 and 2012-2013 = 852]

13. Mrs. Latha submits the following particulars of her Income from other sources for the year ended 31-3-13.

    1) Royalty from books written Rs. 20,000 (expenses incurred for this purpose Rs. 2,000)

    2) Remuneration from articles published in a magazine Rs. 2,000.

    3) Cash worth Rs. 1,00,000 was found in her private locker. The source of which could not be explained by her.

    4) Interest on F.D. in a bank Rs. 15,000.

    5) Rent from subletting a house Rs. 500 p.m.

    6) Winning from lottery net Rs. 69,100.

    7) Winning from horse race Rs. 34,550 (net).

    Compute her Taxable Income from other sources for the A.Y. 2013-14.

14. Sri Ranga is an eminent chartered accountant and a resident of Bangalore. His Receipts and Payments A/c for the year ending 31-3-13 was as given below :

| Receipts | Amt. | Payments | Amt. |
|---|---|---|---|
| To Balance b/d | 1,00,000 | By Office rent | 90,000 |
| To Audit fees | 3,00,000 | By Printing and stationery | 20,000 |
| To Examiners fee | 40,000 | By News papers and magazines | 15,000 |
| To Long-term capital gain | 2,00,000 | By General expenses | 15,000 |
| To Dividend on shares of MRF Ltd. (gross) | 60,000 | By Subscription to CA institute | 60,000 |
| To Director's fees | 50,000 | By Car expenses | 40,000 |
| | | By Electricity and water | 10,000 |
| | | By Telephone expenses | 30,000 |
| | | By Donation to NDF | 50,000 |
| | | By Donation to Rajiv Gandhi foundation | 1,10,000 |
| | | By Donation to approved charitable institution | 40,000 |
| | | By Donation to municipality for family planning | 40,000 |
| | | By Balance c/d | 2,30,000 |
| | **7,50,000** | | **7,50,000** |

Compute Total Income for the A.Year 2013-14.

## ಕನ್ನಡ ಆವೃತ್ತಿ

### ವಿಭಾಗ- ಎ

ಯಾವುದಾದರೂ **ಹತ್ತು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದಕ್ಕೂ 2 ಅಂಕಗಳು. **(10×2=20)**

1. a) ವೃತ್ತಿ ಎಂದರೇನು ?

   b) ವ್ಯವಹಾರ ಮೂಲದಿಂದ ಬಂದ ಆದಾಯದಲ್ಲಿ ಪ್ರತ್ಯಕ್ಷವಾಗಿ ಕಳೆಯ ಬಹುದಾದ ಯಾವುದಾದರೂ ಎರಡು ಖರ್ಚುಗಳನ್ನು ಬರೆಯಿರಿ.

   c) ವಿಸ್ತರಿಸಿ ಸಿ.ಬಿ.ಡಿ.ಟಿ. ಮತ್ತು ಪಿ.ಎ.ಎನ್.

   d) ತೆರಿಗೆ ಮುಕ್ತ ವಾಣಿಜ್ಯ ಸಾಲಪತ್ರಗಳೆಂದರೇನು ?

   e) ಸ್ವ-ಅಂದಾಜು ಅಂದರೇನು?

   f) ಒಟ್ಟು ಆದಾಯ ಎಂದರೇನು ?

   g) ದೀರ್ಘಾವಧಿ ಬಂಡವಾಳ ಆಸ್ತಿ ಎಂದರೇನು?

   h) ವಶಪಡಿಸಿಕೊಂಡ ಬೆಲೆ ಎಂದರೇನು ?

   i) 80 DD ಕಲಂನಡಿ ಮುರಿತಗಳಿಗೆ ಇರುವ ನಿಯಮ ನೀಡಿ.

   j) ಸಾಂಧರ್ಬಿಕ ಆದಾಯ ಎಂದರೇನು ?

   k) ಇತರೆ ಆದಾಯದಲ್ಲಿ ಬರುವ ಯಾವುದಾದರು ಎರಡು ಆದಾಯಗಳನ್ನು ಬರೆಯಿರಿ.

   l) ಬಂಡವಾಳ ಲಾಭ ಎಂದರೇನು?

## ವಿಭಾಗ- ಬಿ

ಈ ಕೆಳಗಿನ ಯಾವುದಾದರೂ **5** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **5** ಅಂಕಗಳು. **(5×5=25)**

2. ಬಂಡವಾಳ ಲಾಭದಲ್ಲಿ ಬರುವ U/S 54 ನ್ನು ವಿವರಿಸಿ.

3. ಆದಾಯ ತೆರಿಗೆ ಅಧಿಕಾರಿಯ ಅಧಿಕಾರ ಮತ್ತು ಕಾರ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

4. ಒಬ್ಬ ವ್ಯಾಪಾರಿಯ ಲಾಭ ಮತ್ತು ನಷ್ಟತಖ್ತೆಯು ಮುಂದಿನ ಅಂಶಗಳನ್ನು ಕಡಿತಗೊಳಿಸಿದ ನಂತರ ರೂ. 22,000 ಗಳ ನಿವ್ವಳ ಲಾಭವನ್ನು ತೋರಿಸುತ್ತಿದೆ :

   ಆದಾಯ ತೆರಿಗೆ ರೂ. 8,000, ಆದಾಯ ತೆರಿಗೆ ಮೇಲ್ಮನವಿ ಖರ್ಚು ರೂ. 5,000, ವ್ಯಾಪಾರಕ್ಕೆ ಪಡೆದ ಸಾಲದ ಮೇಲಿನ ಬಡ್ಡಿ ರೂ. 3,000, ಕಛೇರಿಗೆ ಕೊಂಡು ಕೊಂಡ ಪೀಠೋಪಕರಣಗಳು ರೂ. 4,000, ಒಬ್ಬ ಸಾಲ ಕೊಟ್ಟವರಿಗೆ ರೂ. 30,000ಗಳನ್ನು ನಗದಾಗಿ ಕೊಟ್ಟಿದ್ದು, ರಾಷ್ಟ್ರೀಯ ರಕ್ಷಣಾ ನಿಧಿಗೆ ದೇಣಿಗೆ ರೂ. 5,000 ಮತ್ತು ಕರಡು ಸಾಲ ವಸೂಲಾತಿ (ಹಿಂದೆ ಒಪ್ಪದಿದ್ದುದು) ರೂ. 5,000. ಇವರ ವ್ಯಾಪಾರಿ ಆದಾಯವನ್ನು ತೆರಿಗೆ ವರ್ಷ 2013-14 ಕ್ಕೆ ಕಂಡು ಹಿಡಿಯಿರಿ.

5. ಶ್ರೀಯುತ ಪವನರ ಆದಾಯವು ವಾರ್ಷಿಕ ಕೊನೆಯ ದಿನಾಂಕ 31-3-2013 ರಂದು ಈ ಕೆಳಗಿನಂತಿದೆ.

   i) ಟಾಟಾ ಕಂಪೆನಿಯಿಂದ ಡಿವಿಡೆಂಡ್ ರೂ. 12,000.

   ii) ಮಧ್ಯಂತರ ಡಿವಿಡೆಂಡ್ ಪಡೆದಿದ್ದು ರೂ. 5,000.

   iii) ಆತ ರಾಜಸ್ಥಾನ ರಾಜ್ಯ ಲಾಟರಿಯಿಂದ ಗೆದ್ದ ಚಿನ್ನದ ಮೌಲ್ಯ ರೂ. 2,50,000.

   iv) ಸರ್ಕಾರಿ ಸಾಲ ಪತ್ರಗಳ ಹೂಡಿಕೆಯ ಮೇಲಿನ ಬಡ್ಡಿ ರೂ. 20,000.

   v) ಕುದುರೆ ರೇಸಿನಲ್ಲಿ ರೂ. 10,000 ಬಹುಮಾನ ಪಡೆದಿರುತ್ತಾನೆ.

   ಇವರ ಇತರ ಮೂಲಗಳಿಂದ ಬಂದ ಆದಾಯವನ್ನು ಕರ ವರ್ಷ 2013-14 ಕ್ಕೆ ಕಂಡು ಹಿಡಿಯಿರಿ.

6. ತಾ. 1-1-1985 ರಂದು ಮಿಸ್ಟರ್ ರಘು ಇವರು ಒಂದು ನಿವೇಶನವನ್ನು ರೂ. 1,20,000 ಗಳಿಗೆ ಖರೀದಿ ಮಾಡಿದ್ದಾರೆ ಮತ್ತು ಅದನ್ನು ತಾ. 1-1-2013 ರಂದು ರೂ. 18,00,000 ಗಳಿಗೆ ಮಾರಿದ್ದಾರೆ. ಅದರ ಮಾರಾಟದ ಮೇಲೆ ದಲ್ಲಾಳಿಯು ರೂ. 12,000 ಆದರೆ, ಬಂಡವಾಳದ ಲಾಭವನ್ನು ನಿರ್ಧರಿಸಿ.

[ಬೆಲೆ ಸೂಚ್ಯಂಕ : 1984-85 – 125, 2012-13 – 852]

7. 'ಕೇಂದ್ರೀಯ ನೇರ ತೆರಿಗೆಗಳ ಮಂಡಳಿ'ಯ ಯಾವುದಾದರೂ 5 ಅಧಿಕಾರಗಳನ್ನು ಹೇಳಿರಿ.

8. ಈ ಕೆಳಗೆ ಕೊಟ್ಟಿರುವ ಮಾಹಿತಿಯ ಮೂಲಕ ಡಾ|| ಬಾಬು ರವರ ಆದಾಯ ತೆರಿಗೆ ವರ್ಷ 2013-14 ರ ತೆರಿಗೆಗೊಳಪಡುವ ವೃತ್ತಿ ಮೂಲದ ಆದಾಯವನ್ನು ಕಂಡು ಹಿಡಿಯಿರಿ.

ಸ್ವೀಕೃತಿ : ಸಲಹೆಯಿಂದ ಬಂದ ಶುಲ್ಕ ರೂ. 50,000, ರೋಗಿಗಳಿಂದ ಬಂದ ಉಡುಗೊರೆ ರೂ. 20,000, ಮಾವನಿಂದ ಪಡೆದ ಉಡುಗೊರೆ ರೂ. 30,000, ಔಷಧಿ ಮಾರಾಟ ರೂ. 12,000, ಸಂದರ್ಶನ ಶುಲ್ಕ ರೂ. 10,000.

ಪಾವತಿ : ಕ್ಲಿನಿಕ್ ಬಾಡಿಗೆ ರೂ. 25,000, ವೃತ್ತಿಗೆ ಸಂಬಂಧಿಸಿದ ಪುಸ್ತಕ ಖರೀದಿ ರೂ. 12,000, ಚಾರಿಟೇಬಲ್ ಡೊನೇಶನ್ ರೂ. 4,000.

9. ಶ್ರೀಯುತ ಮೂರ್ತಿ ರವರ ವಾರ್ಷಿಕ ವರ್ಷ 2012-13ರ ಮಾಹಿತಿ ಕೆಳಗಿನಂತಿದೆ.

ಪಿಂಚಣಿ ಪಡೆದಿದ್ದು ಮಾಸಿಕ ರೂ. 6,000

ವ್ಯವಹಾರ ಮೂಲದ ಲಾಭ ರೂ. 1,28,000

ಅಲ್ಪಾವಧಿ ಬಂಡವಾಳ ಮೂಲದ ಆದಾಯ ರೂ. 1,10,000

ಈ ವಾರ್ಷಿಕ ಅವಧಿಯಲ್ಲಿ ಜೀವ ವಿಮಾ ಪಾಲಿಸಿಗೆ ರೂ. 15,000 ಮತ್ತು NSC ಗೆ ರೂ. 2,000 ಕೊಟ್ಟಿರುತ್ತಾರೆ

ಆದಾಯ ತೆರಿಗೆ ವರ್ಷ 2013-14 ರಲ್ಲಿ ತೆರಿಗೆಗೊಳಪಡುವ ಅವರ ಆದಾಯವನ್ನು ಕಂಡು ಹಿಡಿಯಿರಿ.

## ವಿಭಾಗ - ಸಿ

ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **15** ಅಂಕಗಳು. **(3×15=45)**

10. ಈ ಕೆಳಗೆ ಕೊಟ್ಟಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಡಾ॥ ನಾಗರಾಜ್ ಅವರ ವೃತ್ತಿಪರ ಆದಾಯವನ್ನು ತೆರಿಗೆ ವರ್ಷ 2013-14 ಕ್ಕೆ ಕಂಡು ಹಿಡಿಯಿರಿ.

**ಹಣ ಸ್ವೀಕೃತಿ ಹಾಗೂ ಪಾವತಿ ತಃಖ್ತೆ**

| ಸ್ವೀಕೃತಿಗಳು | ರೂ. | ಪಾವತಿಗಳು | ರೂ. |
|---|---|---|---|
| ಪ್ರಾರಂಭಿಕ ಶಿಲ್ಕು | 25,000 | ನೌಕರರ ಸಂಬಳ | 46,000 |
| ಸಲಹೆಯಿಂದ ಬಂದ ಶುಲ್ಕ | 75,000 | ಔಷಧಿ ಖರೀದಿ | 18,000 |
| ಭೇಟಿಯಿಂದ ಬಂದ ಶುಲ್ಕ | 62,500 | ಕಾರು ಖರೀದಿ | 2,40,000 |
| ಕೃಷಿ ಆದಾಯ | 40,000 | ಕಾರಿನ ಖರ್ಚುಗಳು | 20,000 |
| ಬ್ಯಾಂಕಿನ ಹೂಡಿಕೆಯ ಬಡ್ಡಿ | 10,000 | ವೈಯಕ್ತಿಕ ಖರ್ಚುಗಳು | 45,000 |
| ರೋಗಿಗಳಿಂದ ಬಂದ ಬಳುವಳಿ | 15,000 | ಆದಾಯ ತೆರಿಗೆ | 15,000 |
| ಮನೆಯಿಂದ ಬಂದ ಬಾಡಿಗೆ | 48,000 | ಜೀವ ವಿಮೆ ಪಾವತಿ | 10,000 |
| ವೃತ್ತಿಗಾಗಿ ಬ್ಯಾಂಕಿನಿಂದ ಪಡೆದ ಸಾಲ | 1,00,000 | ಸಾಲ ಮರು ಪಾವತಿ | 35,000 |
| ಶಸ್ತ್ರಚಿಕಿತ್ಸೆಯಿಂದ ಬಂದ ಸಂಭಾವನೆ | 90,000 | ಮನೆಯ ಪೌರಸಭೆ ತೆರಿಗೆ | 5,000 |
| ಔಷಧಿ ಮಾರಾಟ | 32,500 | ಸಾಲದ ಮೇಲಿನ ಬಡ್ಡಿ | 7,500 |
| | | ಅಂತಿಮ ಲೆಕ್ಕ ಶಿಲ್ಕು | 56,500 |
| | **4,98,000** | | **4,98,000** |

ಹೆಚ್ಚುವರಿ ವಿಷಯಗಳು :

a) ಶೇ. 25 ಭಾಗದಷ್ಟು ಕಾರಿನ ಖರ್ಚು ವೈಯಕ್ತಿಕ ಬಳಕೆಗೆ ಸಂಬಂಧ ಪಟ್ಟಿದೆ.

b) ಶೇ. 15 ಕಾರಿನ ಸವಕಳಿ ದರವಾಗಿದೆ.

c) $\frac{1}{4}$ ಭಾಗದಷ್ಟು ಸಾಲವನ್ನು ವೈಯುಕ್ತಿಕ ಉಪಯೋಗಕ್ಕೆ ತೆಗೆದು ಕೊಂಡಿದ್ದು.

11. ಈ ಕೆಳಗೆ ಕೊಟ್ಟಿರುವ ಶ್ರೀ ನಾಯಕ್‌ರವರ ಲಾಭ ಮತ್ತು ನಷ್ಟ ತಃಖ್ತೆಯಿಂದ ತೆರಿಗೆಗೊಳಪಡುವ ವ್ಯಾಪಾರಿ ಆದಾಯವನ್ನು ತೆರಿಗೆ ವರ್ಷ 2013-14 ಕ್ಕೆ ಕಂಡು ಹಿಡಿಯಿರಿ.

**ಲಾಭ ಮತ್ತು ನಷ್ಟ ತಃಖ್ತೆ 31-3-2013 ಕ್ಕೆ**

| | ರೂ. ಗಳಲ್ಲಿ | | ರೂ. ಗಳಲ್ಲಿ |
|---|---|---|---|
| ಸಂಸ್ಥೆಯ ಖರ್ಚುಗಳು | 15,000 | ಸ್ಥೂಲ ಲಾಭ | 2,65,000 |
| ಸಂಬಳ | 36,000 | ಶೇರುಗಳ ಮೇಲೆ ಲಾಭಾಂಶ | 6,000 |
| ಬಾಡಿಗೆ ಮತ್ತು ತೆರಿಗೆ | 12,000 | ಮನೆ ಆಸ್ತಿ ಬಾಡಿಗೆ | 15,000 |
| ಆದಾಯ ತೆರಿಗೆ | 10,000 | ಸರ್ಕಾರಿ ಪತ್ರಗಳ ಮೇಲೆ ಬಡ್ಡಿ | 20,000 |
| ಮನೆ ಸಂಬಂಧ ಖರ್ಚು | 14,000 | | |
| ಕರಡು ಸಾಲಕ್ಕೆ ಮೀಸಲು | 5,000 | | |
| ಜಾಹೀರಾತು | 15,000 | | |
| ದೇಣಿಗೆ | 6,000 | | |
| ಮಾರಾಟ ತೆರಿಗೆ | 20,000 | | |
| ಆದಾಯ ತೆರಿಗೆಗೆ ಹಂಚಿಕೆ | 8,000 | | |
| ತೆಗೆದು ಕೊಂಡಿದ್ದು | 4,000 | | |

| | | |
|---|---|---|
| ಬಂಡವಾಳದ ಮೇಲೆ ಬಡ್ಡಿ | 9,000 | |
| ಕರಡು ಸಾಲ | 19,500 | |
| ರಿಪೇರಿ | 26,000 | |
| ಕಾರು ಖರ್ಚು | 11,000 | |
| ಸವಕಳಿ | 20,500 | |
| ನಿವ್ವಳ ಲಾಭ | 75,000 | |
| | **3,06,000** | **3,06,000** |

ಹೆಚ್ಚುವರಿ ಮಾಹಿತಿಗಳು :

a) ಸಂಬಳದಲ್ಲಿ ರೂ. 6,000 ಮನೆಯ ಕೆಲಸದವನಿಗೆ ಕೊಟ್ಟದ್ದು ಸೇರಿರುತ್ತದೆ.

b) ಶೇಕಡ 60 ರಷ್ಟು ಕಾರು ಖರ್ಚುಗಳು ವ್ಯಾಪಾರಕ್ಕೆ ಸಂಬಂಧಿಸಿದ್ದು.

c) ಸಂಸ್ಥೆಯ ಖರ್ಚುಗಳಲ್ಲಿ ರೂ. 5,000 ಖಾಸಗಿ ಖರ್ಚು ಸೇರಿದೆ.

12. ಶ್ರೀ ರಾಮಕೃಷ್ಣ ಮೈಸೂರಿನ ನಿವಾಸಿಯಾಗಿದ್ದು ಅವರು ದಿನಾಂಕ 16-11-1970 ರಂದು ವಾಸದ ಮನೆಯನ್ನು ಮೈಸೂರಿನಲ್ಲಿ ರೂ. 2,26,000 ಕ್ಕೆ ಖರೀದಿ ಮಾಡುತ್ತಾರೆ. ಅವರು ಜುಲೈ 1981 ರಲ್ಲಿ ನೆಲ ಮಹಡಿಯಲ್ಲಿ ಒಂದು ಕೊಠಡಿಯನ್ನು ರೂ. 40,000 ಖರ್ಚಿನಲ್ಲಿ ಕಟ್ಟುತ್ತಾರೆ ಮತ್ತೊಮ್ಮೆ ಆಗಸ್ಟ್ 1993 ರಲ್ಲಿ ಎರಡು ಕೊಠಡಿಗಳನ್ನು ಮೊದಲನೇ ಮಹಡಿಯಲ್ಲಿ ನಿರ್ಮಿಸುತ್ತಾರೆ. ಈ ಎರಡು ಕೊಠಡಿಗಳಿಗೆ ರೂ. 92,000 ಖರ್ಚಾಗಿದೆ.

13 ನೇ ಮಾರ್ಚ್ 2013 ರಂದು ಅವರು ಈ ಮನೆಯನ್ನು ರೂ. 35,00,000 ಕ್ಕೆ 1% ದಲ್ಲಾಳಿ ನೀಡಿದ ನಂತರ ಮಾರಿರುತ್ತಾರೆ. ದಿನಾಂಕ 1-4-1981 ರಂದು ಈ ಸ್ವತ್ತಿನ ಮಾರುಕಟ್ಟೆ ಬೆಲೆ ರೂ. 1,80,000 ಆಗಿರುತ್ತದೆ. ದಿನಾಂಕ 25-3-2013 ರಂದು ಅವರು ಮೈಸೂರಿನಲ್ಲಿ ಹೊಸ ವಾಸದ ಮನೆಯನ್ನು ರೂ. 32,00,000 ಕೊಳ್ಳುತ್ತಾರೆ. ಬೆಲೆ ಸೂಚ್ಯಂಕ 1981-82 = 100, 1993-94 = 244 ಹಾಗೂ 2012-2013 = 852.

ತೆರಿಗೆ ವರ್ಷ 2013-14 ಕ್ಕೆ ಅನ್ವಯಿಸುವಂತೆ, ಬಂಡವಾಳ ಲಾಭವನ್ನು ನಿರ್ಧರಿಸಿ.

13. Mrs.ಲತಾ ರವರ 31-3-2013 ರ ತೆರಿಗೆ ವರ್ಷದ ಇತರೆ ಆದಾಯದ ವಿವರ ಸಲ್ಲಿಸಿದ್ದಾರೆ. ಅವರ ಆದಾಯ 2013-14 ಕ್ಕೆ ಕಂಡು ಹಿಡಿಯಿರಿ.

1) ಪುಸ್ತಕದಿಂದ ರಾಯಲ್ಟಿ ರೂ. 20,000 ಗಳು (ಇದಕ್ಕೆ ಖರ್ಚು ರೂ. 2,000 ಗಳು).

2) ನಿಯತಕಾಲಿಕೆಯಲ್ಲಿ ಪ್ರಬಂಧ ಬರೆದಿದ್ದಕ್ಕೆ ಸಂಭಾವನೆ 2,000 ರೂ.

3) ಇವರ ಲಾಕರ್‌ನಲ್ಲಿ 1,00,000 ರೂ. ದೊರಕಿದೆ. ಇದು ಎಲ್ಲಿಂದ ಬಂತು ಎಂಬ ವಿವರಣೆ ನೀಡಿಲ್ಲ.

4) ಖಾಯಂ ಠೇವಣಿಯಿಂದ ಬಡ್ಡಿ 15,000 ರೂ.

5) ಬಾಡಿಗೆಗೆ ಪಡೆದು ಮತ್ತೆ ಬಾಡಿಗೆಗೆ ನೀಡಿರುವುದು ಪ್ರತಿ ತಿಂಗಳಿಗೆ 500 ರೂ.

6) ಲಾಟರಿಯಿಂದ ಬಂದ ಹಣ 69,100 ರೂ. ಗಳು.

7) ಕುದುರೆ ಜೂಜಿನಿಂದ ಬಂದ ಹಣ ರೂ. 34,550. (Net)

14. ಶ್ರೀ ರಂಗರವರು ಪ್ರಖ್ಯಾತ ಲೆಕ್ಕ ಪರಿಶೋಧಕರು ಹಾಗೂ ಬೆಂಗಳೂರಿನ ನಿವಾಸಿ. ಇವರ ಸ್ವೀಕೃತಿ ಮತ್ತು ಪಾವತಿ ಖಾತೆ ಆದಾಯ ವರ್ಷಾಂತ್ಯ 31-3-2013 ರಂದು ಈ ಕೆಳಕಂಡಂತಿದೆ.

| ಸ್ವೀಕೃತಿ | ರೂ. ಗಳು | ಪಾವತಿ | ರೂ. ಗಳು |
|---|---|---|---|
| ಆರಂಭದ ನಗದು ಶಿಲ್ಕು | 1,00,000 | ಕಛೇರಿ ಬಾಡಿಗೆ | 90,000 |
| ಲೆಕ್ಕ ಪರಿಶೋಧಕನ ಶುಲ್ಕ | 3,00,000 | ಮುದ್ರಣ ಮತ್ತು ಲೇಖನ ಸಾಮಗ್ರಿ | 20,000 |
| ಪರೀಕ್ಷಾ ಶುಲ್ಕ | 40,000 | ದಿನಪತ್ರಿಕೆ ಮತ್ತು ನಿಯತಕಾಲಿಕೆ | 15,000 |
| ದೀರ್ಘಾವಧಿ ಬಂಡವಾಳ ಆದಾಯ | 2,00,000 | ಸಾಮಾನ್ಯ ಖರ್ಚುಗಳು | 15,000 |
| MRF Ltd. ಶೇರುಗಳ ಲಾಭಾಂಶ (ಸ್ಥೂಲ) | 60,000 | CA ಇನ್‌ಸ್ಟಿಟ್ಯೂಟ್ ವಂತಿಗೆ | 60,000 |

| | | | |
|---|---|---|---|
| ನಿರ್ದೇಶಕರ ಶುಲ್ಕ | 50,000 | ಕಾರಿನ ಖರ್ಚು | 40,000 |
| | | ವಿದ್ಯುಚ್ಛಕ್ತಿ ಮತ್ತು ನೀರು | 10,000 |
| | | ದೂರವಾಣಿ ಖರ್ಚು | 30,000 |
| | | NDF ಗೆ ದೇಣಿಗೆ | 50,000 |
| | | ರಾಜೀವ್ ಗಾಂಧಿ ಫೌಂಡೇಶನ್‌ಗೆ ದೇಣಿಗೆ | 1,10,000 |
| | | ಪ್ರಕಟಿತ ದಾನ ಸಂಸ್ಥೆಗೆ ದೇಣಿಗೆ | 40,000 |
| | | ಕುಟುಂಬ ಯೋಜನೆಗಾಗಿ ಮುನಿಸಿಪಾಲಿಟಿಗೆ ನೀಡಿದ ದೇಣಿಗೆ | 40,000 |
| | | ಕೊನೆಯ ನಗದು ಶಿಲ್ಕು | 2,30,000 |
| | **7,50,000** | | **7,50,000** |

ತೆರಿಗೆ ವರ್ಷ 2013-14 ಕ್ಕೆ ಅನ್ವಯಿಸುವಂತೆ ತೆರಿಗೆಗೊಳಪಡುವ ಆದಾಯವನ್ನು ಕಂಡು ಹಿಡಿಯಿರಿ.

---